ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 16/11/2019

# ಸಿಜೆಐ ಗೊಗೋಯ್‌ಗೆ ಆತ್ಮೀಯ ಬೀಳ್ಕೊಡುಗೆ

## 4 ನಿಮಿಷ ಕಲಾಪದಲ್ಲಿ ಭಾಗಿ | ನಾಳೆ ನಿವೃತ್ತಿ

ಉದಯ 16/11/19

**ನವದೆಹಲಿ:** ಸುಪ್ರೀಂ ಕೋರ್ಟ್‌ನ ಕೊಠಡಿ ಸಂಖ್ಯೆ 1ಕ್ಕೆ ಆಗಮನ, 4 ನಿಮಿಷಗಳ ಕಲಾಪ, 10 ನೋಟಿಸ್‌ಗಳ ಜಾರಿ ಮತ್ತು ಮೌನದ ಮಹತ್ವದ ಕುರಿತ ಟಿಪ್ಪಣಿ...

ಇದೇ 17ರಂದು ನಿವೃತ್ತಿಯಾಗಲಿರುವ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೋಯ್ ಅವರ ಕೊನೆಯ ದಿನದ ಕರ್ತವ್ಯದ ದಿನಚರಿ ಹೀಗಿತ್ತು. ಶುಕ್ರವಾರ ಅವರ ಕೆಲಸದ ಕೊನೆಯ ದಿನವಾಗಿದ್ದು, ಸುಪ್ರೀಂನ ಕೊಠಡಿ ಸಂಖ್ಯೆ 1ಕ್ಕೆ ಆಗಮಿಸಿ 4 ನಿಮಿಷಗಳ ಕಲಾಪದಲ್ಲಿ ಪಾಲ್ಗೊಂಡರು. ನಂತರ, ತಮ್ಮ ಮುಂದೆ ಬಂದ ಎಲ್ಲ 10 ಪ್ರಕರಣಗಳಿಗೆ ಸಂಬಂಧಿಸಿಯೂ ನೋಟಿಸ್ ಜಾರಿ ಮಾಡಿದರು. ಬಳಿಕ ನ್ಯಾಯಾಂಗದಲ್ಲಿ ಮೌನ ಎಷ್ಟು ಮುಖ್ಯ ಎಂಬ ಬಗ್ಗೆ ಟಿಪ್ಪಣಿಯೊಂದನ್ನು ಬರೆಯುವ ಮೂಲಕ ಕಿವಿಮಾತು ಹೇಳಿದರು.

ನ್ಯಾಯಾಂಗದ ಹುದ್ದೆಯಲ್ಲಿರುವವರು ತಮ್ಮ ಸ್ವಾತಂತ್ರ್ಯವನ್ನು ಬಳಸಿಕೊಳ್ಳುತ್ತಲೇ ಹೇಗೆ ಮೌನ ವಹಿಸಬೇಕು ಎಂದು ತಿಳಿಸಿಕೊಟ್ಟರು. 'ಮೌನ ವಹಿಸಬೇಕು ಎಂದಾಕ್ಷಣ ಜಡ್ಜ್‌ಗಳು ಮಾತನಾಡಲೇಬಾರದು ಎಂದರ್ಥವಲ್ಲ. ಕೇವಲ ಕಾರ್ಯನಿರ್ವಹಣೆಯಲ್ಲಿ ಅಗತ್ಯ ಎನಿಸಿದಾಗ ಮಾತ್ರವೇ ಮಾತನಾಡಿ' ಎಂದರು. ಜತೆಗೆ, ಕೆಲವೊಂದು ಕಹಿ ಸತ್ಯಗಳು ಸ್ಮೃತಿ ಪಟಲದಲ್ಲಷ್ಟೇ ಉಳಿಯಬೇಕಾಗುತ್ತದೆ ಎಂದೂ ಹೇಳಿದರು.

**ಸಂದರ್ಶನ ನೀಡದ್ದಕ್ಕೆ ಸ್ಪಷ್ಟನೆ:** ಮಾಧ್ಯಮಗಳಿಗೆ ಸಂದರ್ಶನ ನೀಡದೇ ಇದ್ದ ಬಗ್ಗೆ ಮಾತನಾಡಿದ ಅವರು, ನಾನು ಸಾರ್ವಜನಿಕರ ವಿಶ್ವಾಸ ಮತ್ತು ನಂಬಿಕೆಯನ್ನೇ ಅವಲಂಬಿಸಿರುವಂಥ ಸಂಸ್ಥೆಯೊಂದಕ್ಕೆ ಸೇರಿದವನು. ಹೀಗಾಗಿ, ಮಾಧ್ಯಮಗಳಿಂದ ದೂರ ಇರಲು ಬಯಸಿದ್ದೇನೆ ಎಂದರು. ಇದೇ ವೇಳೆ, ಮಾಧ್ಯಮಗಳು ಕೆಲವೊಂದು ಸಂದಿಗ್ಧ ಸಂದರ್ಭದಲ್ಲೂ ಪ್ರೌಢಿಮೆ ಮೆರೆದಿವೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.



**ನಿರ್ಗಮಿತ ಸಿಜೆಐ ಗೊಗೋಯ್ ಅವರಿಗೆ ನಿಯೋಜಿತ ಸಿಜೆಐ ಎಸ್.ಎ.ಬೋಬ್ಡೆ ಮತ್ತಿತರ ಗಣ್ಯರು ಸ್ಮರಣಿಕೆ ನೀಡಿ ಗೌರವಿಸಿದರು.**

**ಸರಳ ಬೀಳ್ಕೊಡುಗೆ ಸಮಾರಂಭ:** ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಷನ್ ವತಿಯಿಂದ ಶುಕ್ರವಾರ ಸಂಜೆ ಸಿಜೆಐ ಗೊಗೋಯ್ ಅವರ ಬೀಳ್ಕೊಡುಗೆ ಸಮಾರಂಭ ಅತ್ಯಂತ ಸರಳವಾಗಿ ನೆರವೇರಿತು. ನ್ಯಾ. ಗೊಗೋಯ್ ಸೂಚನೆ ಮೇರೆಗೆ ಔಪಚಾರಿಕ ಭಾಷಣಗಳೂ ನಡೆಯಲಿಲ್ಲ. ನಿಯೋಜಿತ ಸಿಜೆಐ ಎಸ್.ಎ.ಬೋಬ್ಡೆ ಸೇರಿದಂತೆ ಸುಪ್ರೀಂ ಕೋರ್ಟ್‌ನ ಬಹುತೇಕ ಎಲ್ಲ ನ್ಯಾಯಮೂರ್ತಿಗಳೂ ಕಾರ್ಯಕ್ರಮದಲ್ಲಿ ಹಾಜರಿದ್ದರು. ಇದೇ ವೇಳೆ, ಶುಕ್ರವಾರ ಸಿಜೆಐ ಗೊಗೋಯ್ ಅವರು ರಾಜ್‌ಘಾಟ್‌ಗೆ ತೆರಳಿ ಮಹಾತ್ಮನ ಸಮಾಧಿಗೆ ಪುಷ್ಪನಮನ ಸಲ್ಲಿಸಿದರು.

7